ಶ್ರೀ ಯು. ಭೂಪತಿ.—ಸ್ವಾಮಿ, ಸಂಡೂರು ಮೊದಲು ನಗರಸಭೆಯಾಗಿತ್ತು. ಈಗ ಮುಂಡಲ ವಾಗಿದೆ. ಇನ್ನು ಮುಂದೆ ಕುಡಿಯುವ ನೀರಿನ ಯೋಜನೆಯನ್ನು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಮಾಡಿಸುತ್ತೀರೋ ಅಥವಾ ಗ್ರಾಮಾಭಿವೃದ್ಧಿ ಇಲಾಖೆಯಿಂದ ಮಾಡಿಸುತ್ತೀರೋ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇನ್ನು ಮುಂದೆ ಜಿಲ್ಲಾಪರಿಷತ್ತು ಅದನ್ನು ಮುಂದು ಪರಿಸುತ್ತದೆ.

ಶ್ರೀ ಯು. ಭೂಪತಿ.—ನಾರಿಹಳ್ಳಿ ಜಲಾಶಯದಿಂದ ನೀರು ಒದಗಿಸಲು ೯೦ ಲಕ್ಷ ರೂಪಾಯಿ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ಮತ್ತು ಶಿವಗಂಗಾ ಎಂಬ ಸ್ಥಳದಲ್ಲಿ ಕೊಳವೆ ಬಾವಿ ಗಳನ್ನು ತೋಡಿಸಿ ನೀರು ಒದಗಿಸಲು ೫.೯೫ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರಿಸ ಲಾಗಿದೆ ಎಂದು ಹೇಳಿದ್ದೀರಿ. ಈ ಯೋಜನೆಯನ್ನು ಬಹಳ ಹಿಂದೆಯೇ ತಯಾರಿಸಲಾಗಿದೆ. ಈಗ ತಯಾರಿಸುತ್ತಿರುವುದಲ್ಲ. ಈ ಯೋಜನೆ ಯಾವಾಗ ಕಾರ್ಯರೂಪಕ್ಕೆ ಬರುತ್ತದೆ ಎಂಬುದು ಬಹಳ ಮುಖ್ಯ. ಏಕೆಂದರೆ ಇದು ಬಹಳ ದಿವಸಗಳಿಂದ ಇದೆ. ಇದನ್ನು ಕಾರ್ಯರೂಪಕ್ಕೆ ತರತಕ್ಕಂಥ ಪ್ರಶ್ನೆ ನಮ್ಮ ಮುಂದೆ ಇದೆ. ಇದನ್ನು ಯಾವಾಗ ತರುತ್ತೀರಿ ಎಂದು ದಯವಿಟ್ಟು ಹೇಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಇದರ ಬಗ್ಗೆ ಜಿಲ್ಲಾ ಪರಿಷತ್ತು ನಿರ್ಣಯ ತೆಗೆದುಕೊಳ್ಳು ತ್ತದೆ. ಇಡೀ ಸಮಸ್ಯೆ ಇನ್ನು ಮುಂದೆ ಜಿಲ್ಲಾ ಪರಿಷತ್ತಿಗೆ ಹೋಗುತ್ತದೆ. ನಾವು ಕೂಡ ಅಲ್ಲಿ ಇರುತ್ತೀರಿ. ಆದಷ್ಟು ಬೇಗ ಇದನ್ನು ಮಾಡಬೇಕೆಂದು ನಾವು ಕೂಡ ಒತ್ತಾಯಿಸಿ ತೀರ್ಮಾನ ತೆಗದು ಕೊಳ್ಳಬಹುದು.

ಶ್ರೀ ಯು. ಭೂಪತಿ.—ಇಂತಹ ದೊಡ್ಡ ಪಟ್ಟಣಕ್ಕೆ ಕುಡಿಯುವ ನೀರಿನ ಬಗ್ಗೆ ಬಹಳ ಆಭಾವ ಇದ್ದರೂ ಕೂಡ ನಾವು ಜಿಲ್ಲಾ ಪರಿಷತ್ತು ಮುಖಾಂತರ ಇದನ್ನು ಮಾಡಿಸುವುದು ನನಗೆ ಅನುಮಾನ ಇದೆ. ಏಕೆಂದರೆ ಇನ್ನೂ ಜಿಲ್ಲಾ ಪರಿಷತ್ತಿನ ಕಛೇರಿಯೇ ವ್ಯವಸ್ಥಿತವಾಗಿಲ್ಲ. ನೀವು ಅವರಿಗೆ ದುಡ್ಡು ಕಳಿಸಿ, ಮಂಜೂರಾತಿ ತೆಗೆದುಕೊಂಡು ಕೆಲಸ ಪ್ರಾರಂಭವಾಗುವುದು ನನಗೆ ಅನುಮಾನ. ಆದ್ದರಿಂದ ಈಗಲೇ ಮಂಜೂರಾತಿ ಕೊಟ್ಟು ನಗರಾಭಿವೃದ್ಧಿ ಯೋಜನೆ ಅಡಿಯಲ್ಲಿ ಇಲ್ಲಿಗೆ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಂಜೂರಾತಿ ಬರಬೇಕಾದ್ದಿಲ್ಲ, ಹಣ ಬರಬೇಕಾಗಿಲ್ಲ. ಮಂಜೂರಾತಿ ಕೊಡುವ ಅಧಿಕಾರ ಜಿಲ್ಲಾ ಪರಿಷತ್ತಿಗೇ ಇದೆ. ಈಗ ಆದು ಗ್ರಾಮೀಣ ಪ್ರದೇಶವಾಗಿ ಪರಿವರ್ತನೆ ಆಗಿರುವುದರಿಂದ, ನಾವು ಮಾಡುವುದಕ್ಕಾಗುವುದಿಲ್ಲ.

ಶ್ರೀ ಯು. ಭೂಪತಿ.—ಇದು ಸಣ್ಣ ಯೋಜನೆ ಅಲ್ಲ. ಆಷ್ಟು ಸುಲಭವಾಗಿ ಜಿಲ್ಲಾಪರಿಷತ್ತು ಮಂಜೂರಾತಿ ಕೊಡುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದ ಕಮಿಟ್‌ಮೆಂಟ್ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರ ನಗರಾಭಿವೃದ್ಧಿ ಮಂತ್ರಿಗಳ ಕಡೆಯಿಂದ ಬಂದರೂ ಒಂದೇ, ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಕಡೆಯಿಂದ ಬಂದರೂ ಒಂದೇ. ಈ ವಿಚಾರ ಜಿಲ್ಲಾ ಪರಿಷತ್ತಿಗೆ ಹೋಗುತ್ತದೆ, ಅವರು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ.

ದಾವಣಗೆರೆ ಗೃಹ ನಿರ್ಮಾಣದ ಬಗ್ಗೆ

೭೮ (೩೭೯) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆ ಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೪-೮೫, ೧೯೮೫-೮೬ ಈ ಮೂರು ವರ್ಷಗಳಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹಾಗೂ ಜಿಲ್ಲೆಗಳಿಗೆ ಸಂಬಂಧಪಟ್ಟ ಯಾವ ಯಾವ ಊರುಗಳಲ್ಲಿ ಗೃಹ ನಿರ್ಮಾಣ ಮಂಡಳಿಯ ವತಿಯಿಂದ ಮನೆಗಳು ನಿರ್ಮಾಣಮಾಡಿಸಿವೆ ?

ಆ) ದಾವಣಗೆರೆ ನಗರದಲ್ಲಿ ಗೃಹ ಮಂಡಳಿ ಅಥವಾ ಹುಡ್ಕೋ ಯೋಜನೆಯಿಂದ ಎಷ್ಟು ವಾಸದ ಮನೆಗಳು ನಿರ್ಮಾಣವಾಗುತ್ತಿದೆ ಹಾಗಿಲ್ಲದಿದ್ದಲ್ಲಿ, ಗೃಹ ನಿರ್ಮಾಣ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ವಿವರಗಳನ್ನು ಅನುಬಂಧ 'ಅ'ನಲ್ಲಿ ಲಗತ್ತಿಸಲಾಗಿದೆ.

ಆ) ದಾವಣಗೆರೆ ನಗರದಲ್ಲಿ ಈ ವರ್ಷ ಗೃಹ ಮಂಡಳಿ ಅಥವಾ ಹುಡ್ಕೋ ಯೋಜನೆಯಿಂದ ಮನೆಗಳ ನಿರ್ಮಾಣ ಕಾರ್ಯಕ್ರಮ ಯಾವುದು ಇರುವುದಿಲ್ಲ. ಯೋಗ್ಯವಾದ ಜಮೀನು ಸಾಕಷ್ಟು ಪ್ರಮಾಣದಲ್ಲಿ ಲಭ್ಯ ಇಲ್ಲದಿರುವುದರಿಂದ ಮನೆಗಳ ನಿರ್ಮಾಣ ಕಾರ್ಯಕ್ರಮ ತೆಗೆದುಕೊಂಡಿರುವುದಿಲ್ಲ.

ಕರ್ನಾಟಕ ಗೃಹ ಮಂಡಳಿ ೧೯೮೪–೮೫ ಮತ್ತು ೧೯೮೫–೮೬ರಲ್ಲಿ ಪೂರ್ಣಗೊಳಿಸಿದ ಕಾಮಗಾರಿ ಕೆಲಸ ಮತ್ತು ೮೬–೮೭ನೇ ಸಾಲಿನ ಕಾರ್ಯಸೂಚಿ ಪಟ್ಟಿ

ಕ್ರಮ ಸಂಖ್ಯೆ	ವರ್ಷ	ಮನೆಗಳು		
		ಹುಡ್ಕೋ ನೆರವಿನಿಂದ	ರಾಜ್ಯ ಯೋಜನೆ	ಒಟ್ಟು
೧	೧೯೮೪–೮೫	೪,೪೧೦	೬೬೩	೫,೦೭೩
೨	೧೯೮೫–೮೬	೩,೨೩೭	೬೯೧	೩,೯೨೮
೩	೧೯೮೬–೮೭	೫,೯೭೨	೪೨೩	೬,೪೦೦
	ಒಟ್ಟು	೧೫,೬೨೪	೧,೭೭೭	೧೫,೪೦೧

ಅನುಬಂಧ—ಎ (ವಿವರಗಳು)

೧೯೮೪–೮೫ನೇ ಸಾಲಿನಲ್ಲಿ ಹುಡ್ಕೋ ಸಂಸ್ಥೆಯ ನೆರವಿನಿಂದ ಕಾಮಗಾರಿ ಕೆಲಸ ಪೂರ್ಣಗೊಂಡ ಮನೆಗಳ ಪಟ್ಟಿ

ಕ್ರಮ ಸಂಖ್ಯೆ	ಸ್ಥಳದ ಹೆಸರು	ಮನೆಗಳ ಸಂಖ್ಯೆ			
		ಆರ್ಥಿಕವಾಗಿ ಹಿಂದುಳಿದ ವರ್ಗ	ಹಿಂದುಳಿದ ವರ್ಗ	ಇತರೆ ಹಿಂದುಳಿದ ವರ್ಗ	ಪರಿಶಿಷ್ಟ ಜಾತಿ ಮತ್ತು ಪಂಗಡ
೧	ಯಲಹಂಕ (ನಿವೇಶನಗಳು)	೨೩೪	೩೦	—	೪೫
	ಉಪನಗರ (ನಿವೇಶನಗಳು)	೪೮	—	೧೨	೮೦
೨	ರಾಮನಗರ	೪೨	—	೧೨	—
೩	ಕಾಣಿಗಲ್	೧೯೯	—	—	—
೪	ಕೊಟ್ಟಿಗೆರೆ	೫೦	—	—	—
೫	ಓ ಪಿ ಡಿ ಬಳ್ಳಾರಿ	೧೬೩	—	೧೫೨	—
೬	ರಾಯಚೂರು	೬೦	೫೦	—	—
೭	ಸಿರಗುಪ್ಪ	೫೯	೫೪	—	—
೮	ಬಡೇಪುರ	೬೦	೧೮೦	—	—

೧	೨	೩	೪	೫	೬
೯	ಹಳ್ಳಿಸಾಗರ್	೪೩	—	—	—
೧೦	ಹುಮ್ನಾಬಾದ್	—	೩೪	೩೧	—
೧೧	ಚೆನ್ನರಾಯಪಟ್ಟಣ	೧೩೦	೭೨	೩೮	—
೧೨	ಹೊಳೆನರಸೀಪುರ	—	—	೨೮	—
೧೩	ಹಾಸನ	೫೫	೮	—	—
೧೪	ಗದಗ್	೨೩೬	೧೭೦	—	—
೧೫	ಉಣಕಲ್	—	೬೦	—	—
೧೬	ದೊಡ್ಡನಾಯಕನ ಕೊಪ್ಪ	೨೭	೧೯	—	—
೧೭	ದೊಡ್ಡನಗುಡ್ಡ	—	೪೦	೮	—
೧೮	ಕರವಲಬಡಗ	೫೦	೫೦	೧೦	—
೧೯	ಸೋಮವಾರಪೇಟೆ	೨೦	೨೦	೨	—
೨೦	ಕಸರೆ ಬೆಳಿವತ್ತ	೨೧೫	೧೨೧	೪೫	—
೨೧	ಚಾಮರಾಜನಗರ (ಬೀಡಿ ಕಾರ್ಮಿಕರಿಗಾಗಿ)	೧೩೮	—	—	—
೨೨	ಕಲ್‌ಕಾಣಿಕೆ	೪೨	೧೩೦	—	—
೨೩	ಗುಂಡ್ಲುಪೇಟೆ	೧೫೬	೨೭	—	—
೨೪	ಹೊಸಹಳ್ಳಿ ಮಂಡ್ಯ ಪೊದಲನೇ ಹಂತ	—	೪೨	—	—
	ಎರಡನೇ ಹಂತ	೧೪೪	೧೦೩	೩೯	—
೨೫	ಬಟ್‌ಕಲ್	—	—	೧೪	—
೨೬	ಚಿತ್ರದುರ್ಗ	—	೪೯	೧೫	—
೨೭	ಹರಿಹರ	—	೧೨	೫	—
೨೮	ಕಲ್ಲಹಳ್ಳಿ	೫೦	೪೬	೩೩	—
೨೯	ಗೋಪಾಲ	೭೬	೪೧	೩೪	—
೩೦	ಭದ್ರಾವತಿ	೪೪	೫೦	—	—
೩೧	ಹೊಳಲ್‌ಕೆರೆ (ಎಲ್ ಸಿ ಹೆಚ್)	೫೦	—	—	—
	ಒಟ್ಟು	೨೩೪೭	೧೪೪೪	೪೫೦	೧೨೫—೪೪೧೦

೧೯೪೪–೪೫ನೇ ಸಾಲಿನಲ್ಲಿ ರಾಜ್ಯ ಯೋಜನೆಯ ನೆರವಿನಿಂದ ಕಾವುಗಾರಿ ಕೆಲಸ ಪೂರ್ಣಗೊಂಡ ಮನೆಗಳ ಪಟ್ಟಿ

ಕ್ರಮಸಂಖ್ಯೆ	ಸ್ಥಳದ ಹೆಸರು	ಮನೆಗಳ ಸಂಖ್ಯೆ			
		ಅರ್ಥಿಕವಾಗಿ ಹಿಂದುಳಿದ ವರ್ಗ	ಹಿಂದುಳಿದ ವರ್ಗ	ಪರಿಶಿಷ್ಟ ಜಾತಿ ಮತ್ತು ಪಂಗಡ	ಇತರೆ
೧	೨	೩	೪	೫	೬
೧	ಆಗ್ರಹಾರ ದಾಸರಹಳ್ಳಿ	—	—	೨೦	೨
೨	ಜಯನಗರ	—	೨	—	—
೩	ಜಯಪುರ	೧೦	—	—	—
೪	ಸಿದ್ಲಘಟ್ಟ	೧೦	೨೫	—	—

೧	೨	೩	೪	೫	೬
೫	ಕೆ. ನಾರಾಯಣಪುರ	೧೦	೪೦	೧೬	—
೬	ತುರುವೇಕೆರೆ	—	೭	—	—
೭	ಆನೇಕಲ್	೫೦	—	—	—
೮	ಸಾದ್ಲಿ (ಉಪಾಧ್ಯಾಯರ ವಸತಿ ಗೃಹ)	೬	—	—	—
೯	ಹೊಸಪೇಟೆ	—	೬	—	—
೧೦	ಹಗರಿ ಬೊಮ್ಮನಹಳ್ಳಿ	—	೨೦	—	—
೧೧	ಬಾಚಿಗೊಂಡನಹಳ್ಳಿ (ಉಪಾಧ್ಯಾಯರ ವಸತಿ ಗೃಹ)	೪			
೧೨	ಹೊಸಹಳ್ಳಿ (ಉಪಾಧ್ಯಾಯರ ವಸತಿ ಗೃಹ)	೪			
೧೩	ಸೀಬೊಹಳ್ಳಿ (ಪ್ಯಾರ ಮೆಡಿಕಲ್)	೧೭			
೧೪	ಹಡಗಲಿ (ಪ್ಯಾರ ಮೆಡಿಕಲ್)	೩			
೧೫	ನಿಜಲಿಂಗಪ್ಪ ನಗರ, ರಾಯಚೂರ್ ಕರ್ನಾಟಕ ಗೃಹ ನೌಕರರಿಗಾಗಿ	೨	—	೧೨	—
೧೬	ಗಂಗಾವತಿ	—	೨	—	—
೧೭	ಕೊಪ್ಪಲ್	—	—	೩	—
೧೮	ಕಲ್ಲೂರ್ (ಉಪಾಧ್ಯಾಯರ ವಸತಿ ಗೃಹ)	೪			
೧೯	ಹರಪನಹಳ್ಳಿ (ಎಸ್‌ಆರ್‌ಹೆಚ್. ಎಸ್)	೧೬			
೨೦	ಬಡೆಪುರ	—	೧೬	೧೬	—
೨೧	ಆಲಂದ್ ರಸ್ತೆ	—	—	೧೪	—
೨೨	ಬೀದರ್	—	—	೫	—
೨೩	ಬಸವ ಕಲ್ಯಾಣ	—	೬	೪	—
೨೪	ಚಿತ್ತಾಪುರ	—	೬	—	—
೨೫	ನರಸಿಂಹರಾಜಪುರ	—	೬	—	—
೨೬	ಚಿಕ್ಕಮಗಳೂರು (ಕರ್ನಾಟಕ ಗೃಹ ಮಂಡಳಿ ನೌಕರರಿಗಾಗಿ)	೧೦			
೨೭	ಕೊಪ್ಪ	—	—	೨	—
೨೮	ನವಿಲೆ	—	—	೪	—
೨೯	ದೊಡ್ಡಹಳ್ಳಿ (ಉಪಾಧ್ಯಾಯರ ವಸತಿ ಗೃಹ)	೧೦			
೩೦	ಉದಯಪುರ	—	೪	—	—
೩೧	ಬಿಜಾಪುರ ಏನೇ ಹಂತ	—	೧೨	—	—
೩೨	ಬಾದಾಮಿ	—	೧೨	—	—
೩೩	ಆಲಿಮೇತಿ (ಉಪಾಧ್ಯಾಯರ ವಸತಿ ಗೃಹ)	೬			
೩೪	ಪುತ್ತೂರ್	—	—	೧೦	—
೩೫	ಮುಲ್ಕಿ	—	೧೦	೮	—
೩೬	ಪ್ರಾಂತೀಯ ಮೂಡುಬಿದರೆ	—	—	೯	—
೩೭	ಮರಕಡ (ಕರ್ನಾಟಕ ಗೃಹ ಮಂಡಳಿ ನೌಕರರಿಗಾಗಿ)	೮			
೩೮	ದೊಡ್ಡನಗುಡ್ಡ, ಉಡುಪಿ	—	೧೦	೩೦	—
೩೯	ಕೃಷ್ಣರಾಜನಗರ	—	೧೦	೩೪	—
೪೦	ಚಿಕ್ಕನಹಳ್ಳಿ	೨೦	—	—	—

೧	೨	೩	೪	೫	೬
೪೧	ಜಯನಗರ ತೊಣಚಿಕೊಪ್ಪಲ್ ಸೀನೇ ಹಂತ	—	೩೬	—	—
೪೨	ಕಲ್‌ಕಾಣಿಕೆ	೧೯	—	—	—
೪೩	ನಾಗಮಂಗಲ	—	—	೩	—
೪೪	ಹೆಗ್ಗಡದೇವನ ಕೋಟೆ	—	—	೧೦	—
೪೫	ತಗಡೂರು (ಉಪಾಧ್ಯಾಯರ ವಸತಿಗೃಹ)	೨			
೪೬	ಕುಮಟ	—	೪	—	—
೪೭	ಹೊನ್ನಪುರ	—	೪	—	—
೪೮	ಹೊಳಲ್‌ಕೆರೆ	—	೬	—	—
೪೯	ತೀರ್ಥಹಳ್ಳಿ	—	—	೨	—
೫೦	ಚೆನ್ನಗಿರಿ	—	—	೨	—
೫೧	ದಾವಣಗೆರೆ(ಎಸ್‌ಆರ್‌ಹೆಚ್‌ಎಸ್)	೬			
		೧೧೯	೨೪೪	೨೦೪	೨ ೬೬೩
	ಇತರೆ	೧೯೪			

೧೯೪೫-೪೬ನೇ ಸಾಲಿನಲ್ಲಿ ಹುಡ್ಕೋ ಸಂಸ್ಥೆಯು ನೆರವಿನಿಂದ ಕಾಮಗಾರಿ ಕೆಲಸ ಪೂರ್ಣಗೊಂಡ ಮನೆಗಳ ಪಟ್ಟಿ

ಕ್ರಮ ಸಂಖ್ಯೆ	ಸ್ಥಳದ ಹೆಸರು	ಮನೆಗಳ ಸಂಖ್ಯೆ			
		ಆರ್ಥಿಕವಾಗಿ ಹಿಂದುಳಿದ ವರ್ಗ	ಅಲ್ಪ ಆದಾಯ ವರ್ಗ	ಮಧ್ಯಮ ಆದಾಯ ವರ್ಗ	ಹೆಚ್ಚಿನ ಆದಾಯ ವರ್ಗ
೧	ಅಗ್ರಹಾರ ದಾಸರ ಹಳ್ಳಿ	—	—	—	೭
೨	ಯಲಹಂಕ ಸೀನೇ ಹಂತ	—	೩೧೪	—	—
೩	ರಾಮನಗರ	—	೩೮	—	—
೪	ಸಿರಗುಪ್ಪ	೮೪	೫೦	—	—
೫	ಒ ಪಿ ಡಿ ಬಳ್ಳಾರಿ	೯೯	೧೪೬	೫೫	—
೬	ಜೇವರ್ಗಿ	—	೧೦	—	—
೭	ಬಡೇಪುರ ಗುಲ್ಬರ್ಗ	—	೮೬	—	—
೮	ಹುಮ್ನಾಬಾದ್	೩೩	೧೭	೨	—
೯	ಬೀದರ್	—	೬	—	—
೧೦	ಬೀರನಹಳ್ಳಿ	೧೪	—	೬	—
೧೧	ಚಿನ್ನರಾಯಪಟ್ಟಣ	೧೨೮	೪೯	೨೦	—
೧೨	ಹೊಳೆನರಸೀಪುರ	೧೦೧	೧೫೪	—	—
೧೩	ಗದಗ್	—	೮೭	೨೪೨	—
೧೪	ಆಲ್ಲೂಪುರ ಗೋತಾನೆ	೨೯	—	—	—
೧೫	ಉಲಕಲ್ ಹುಬ್ಬಳ್ಳಿ	೮೧	೧೮೯	೧೭೫	—
೧೬	ಚಿಕ್ಕೋಡಿ	೫೦	೫೧	೨೫	—

೧	೨	೩	೪	೫	೬
೧೭	ಬಾದಾಮಿ	೨೮	—	—	—
೧೮	ಕುಶಾಲನಗರ	೬೩	೪೨	—	—
೧೯	ಶಿವಳ್ಳಿ ಮಣಿಪಾಲ್	—	—	೬೦	—
೨೦	ಸೋಮವಾರ ಪೇಟೆ	—	—	೯	—
೨೧	ಕೆಸರೆ ಬೆಲವತ್ತ	—	೭	೧೭	—
೨೨	ಚಾಮರಾಜನಗರ	೧೪೩	—	—	—
೨೩	ಗುಂಡ್ಲುಪೇಟೆ	—	—	೧೭	—
೨೪	ಕುವೆಂಪು ನಗರ	೧೧೨	—	—	—
೨೫	ಗೊಪಾಲ	೨೬	—	೨೫	—
೨೬	ಮಲ್ಲಾಡಿ ಹಳ್ಳಿ (ಎಲ್‌ಸಿಹೆಚ್)	೫೦			
೨೭	ಬೊಮ್ಮನಕಟ್ಟೆ	೧೭	೪	—	—
	ಒಟ್ಟು	೧೩೨೩	೧೨೫೪೪	೬೫೩	೭

= ೩೨೩೭

೧೯೮೫-೮೬ನೇ ಸಾಲಿನಲ್ಲಿ ರಾಜ್ಯ ಯೋಜನೆಯ ನೆರವಿನಿಂದ ಕಾಮಗಾರಿ ಕೆಲಸ ಪೂರ್ಣಗೊಂಡ ಮನೆಗಳ ಪಟ್ಟಿ

ಕ್ರಮ ಸಂಖ್ಯೆ	ಸ್ಥಳದ ಹೆಸರು	ಮನೆಗಳ ಸಂಖ್ಯೆ			
		ಆರ್ಥಿಕವಾಗಿ ಹಿಂದುಳಿದ ವರ್ಗ	ಅಲ್ಪ ಆದಾಯ ವರ್ಗ	ಮಧ್ಯಮ ಆದಾಯ ವರ್ಗ	ಹೆಚ್ಚಿನ ಆದಾಯ ವರ್ಗ
೧	ಹೊಸಕೋಟೆ	—	೩	೧	—
೨	ಯಲ್ಲೂರು (ಉಪಾಧ್ಯಾಯರ ವಸತಿಗೃಹ)-೬				
೩	ಮೇಮಗಲ್ (ಉಪಾಧ್ಯಾಯರ ವಸತಿ ಗೃಹ)-೬				
೪	ಸಿಂಧನೂರ್	—	೧೩	—	—
೫	ಗಡಿಗನೂರೆ (ಉಪಾಧ್ಯಾಯರ ವಸತಿ ಗೃಹ)-೪				
೬	ಕೊಪ್ಪಲ	—	೫	—	—
೭	ಕನಕಗಿರಿ (ಉಪಾಧ್ಯಾಯರ ವಸತಿ ಗೃಹ)-೪				
೮	ಜವಪರ್ ನಗರ	—	೪	—	—

೧	೨	೩	೪	೫	೬
೯	ಯಾದಗಿರಿ	—	—	೧೪	—
೧೦	ಬಡಿಪ್ಪರ ಗುಲ್ಬರ್ಗ	೧೦೪	—	—	—
೧೧	ಕುಂದಾಪುರ	—	೨	—	—
೧೨	ಅರಸೀಕೆರೆ	—	೬	—	—
೧೩	ಕೊಣನೂರು	—	೮	—	—
೧೪	ಕಂಬೇನಹಳ್ಳಿ	—	೨	—	—
೧೫	ಹಾಸನ, ಕರ್ನಾಟಕ ಗೃಹಮಂಡಳಿ ನೌಕರರಿಗಾಗಿ–೧೦				
೧೬	ಕಾಂಡ್ಲಿ (ಉಪಾಧ್ಯಾಯರ ವಸತಿ ಗೃಹ–೪)				
೧೭	ದೊಡ್ಡ ಕುಂಚೆ (ಉಪಾಧ್ಯಾಯರ ವಸತಿ ಗೃಹ)–೬				
೧೮	ಹಲೇಕೋಟೆ (ಉಪಾಧ್ಯಾಯರ ವಸತಿ ಗೃಹ)–೬				
೧೯	ಚಿಕ್ಕಮಗಳೂರು	—	—	೭	—
೨೦	ಹಿಂದಗಿ	೪೦	—	—	—
೨೧	ಬಾದಾಮಿ	—	೮	—	—
೨೨	ಗಳಕಲ್	—	೧೬	—	—
೨೩	ಚಿಕ್ಕೋಡಿ	—	೧೦	೧೦	—
೨೪	ಬಿಜಾಪುರ	—	—	೦೦	—
೨೫	ಜಮಖಂಡಿ	—	—	೧೧	—
೨೬	ನಗರೆಟ್ಟಿಕೊಪ್ಪ	—	—	೨	—
೨೭	ಮುಧೋಳ	—	—	೧೧	—
೨೮	ಮುದ್ದೇಬಿಹಾಳ (ಸರ್ಕಾರಿ ನೌಕರರಿಗೆ ಬಾಡಿಗೆ ಮನೆ ಯೋಜನೆ)–೧೨				
೨೯	ತೊಪಲ್‌ಗಟ್ಟಿ. ಹುಬ್ಬಳ್ಳಿ	—	—	೨	—
೩೦	ಸೂಳೆಬೈಲ್	—	೬	—	—
೩೧	ಮಳಖೇಡ	—	೨೦	೧೧	—
೩೨	ಗುಂಡ್ಲುಪೇಟೆ	೧೦೦	—	—	—
೩೩	ಬಾಡಣಕಳ್ಳಿ	೪೦	—	—	—
೩೪	ಕೃಷ್ಣರಾಜನಗರ	—	—	೨	—
೩೫	ಜಯನಗರ ತೋಣಚಿಕೊಪ್ಪಲ್ ಕರ್ನಾಟಕ ಗೃಹ ಮಂಡಳಿ ನೌಕರರಿಗಾಗಿ–೧೩	—	—	೫	—
೩೬	ದೆ ವನೂರ್ (ಉಪಾಧ್ಯಾಯರ ವಸತಿ ಗೃಹ)–೨				
೩೭	ತಗತೂರು (ಉಪಾಧ್ಯಾಯರ ವಸತಿ ಗೃಹ)–೨				
೩೮	ಹೊಸನಗರ	—	೧೦	—	—

೧	೨	೩	೪	೫	೬
೩೯	ಹೊನ್ನಾವರ	—	೨೦	—	—
೪೦	ಸಿರಿಸಿ	—	೩೦	೩೦	—
೪೧	ಚಳ್ಳಕೆರೆ	—	—	೧೯	—
೪೨	ದಾವಣಗೆರೆ (ಎಸ್ ಆರ್ ಎಚ್ ಎಸ್)–೪				
೪೩	ಕಾರವಾರ	—	—	೨೦	—
	ಒಟ್ಟು	೨೮೪	೧೬೩	೧೬೫	—
			ಇತರೆ	೭೯ =	೯೧

ಕರ್ನಾಟಕ ಗೃಹ ಮಂಡಳಿಯು ೧೯೮೬–೮೭ನೇ ಸಾಲಿನ ಕಾರ್ಯಸೂಚಿ ಮನೆಗಳ ಪಟ್ಟಿ ಹುಡ್ಕೋ ಯೋಜನೆಯಲ್ಲಿ

ಕ್ರಮ ಸಂಖ್ಯೆ	ಸ್ಥಳದ ಹೆಸರು	ಮನೆಗಳ ಸಂಖ್ಯೆ			
		ಆರ್ಥಿಕ ಹಿಂದುಳಿದ ವರ್ಗ	ಅಲ್ಪ ಆದಾಯ ವರ್ಗ	ಮಧ್ಯಮ ಆದಾಯ ವರ್ಗ	ಹೆಚ್ಚಿನ ಆದಾಯ ವರ್ಗ
೧	ಗೃಹಗಳ ರಕ್ಷಕ ದಳದವರಿಗಾಗಿ ಕೋರಮಂಗಲ	೪೯೦	—	—	—
೨	ಯಲಹಂಕ ಉನೇ ಹಂತ	—			
	ಮಧ್ಯಮ ಆದಾಯ ವರ್ಗ–೧	—	—	೧೯೪	೧೨
೩	ಪುಟ್ಟೇನಹಳ್ಳಿ ಯಲಹಂಕ	—	—	೬೭	—
೪	ಗಾಂಧೀನಗರ, ಯಲಹಂಕ	—	—	೧೨೫	—
೫	ಕುಣಿಗಲ್ (ಮ. ಆ. ವರ್ಗ–೧)	೫೪	೫೪	೫೩	—
	(ಮ. ಆ. ವರ್ಗ–೨)	—	—	೩೭	—
೬	ಸಿರಗಂಪ್ಪ	—	—	೧೫	—
೭	ಮೋಕ ರೋಡು ಬಳ್ಳಾರಿ	—	೪೮೪	—	—
೮	ಮೋಕ ರೋಡು ಎ. ಬಿ ಸಿ. ಹತ್ತಿರ ಬಳ್ಳಾರಿ (ಮಧ್ಯಮ ಆದಾಯ ವರ್ಗ–೨)	—	—	೧೨೮	—
೯	ಆಗರಿ ಬೊಮ್ಮಸಪಳ್ಳಿ (ಮ. ಆ. ವ.೧)	—	೭೪	೩೭	—
೧೦	ಕೊಪ್ಪಲು (ರಾಯಚೂರು ಜಿಲ್ಲೆ)				
	(ಮಧ್ಯಮ ಆದಾಯ ವರ್ಗ–೧)	೧೫	೨೩	೨೭	—
	(ಮಧ್ಯಮ ಆದಾಯ ವರ್ಗ–೨)	—	—	೩೦	—

೧	೨	೩	೪	೫	೬
೧೦	ಸಿರಗುಪ್ಪ ೨೨೭೧	—	—	೧೫	—
೧೨	ಬಡೇಪುರ ಗುಲ್ಬರ್ಗ.				
	(೩ನೇ ಹಂತ)	—	೨೫	—	—
೧೩	ಚೆವರ್ಗಿ	—	೧೧	—	—
೧೪	ಒಕ್ಕಲಗೆರೆ				
	(ಅಲ್ಪ ಆದಾಯ ವರ್ಗ–೧)	—	೫೮	—	—
	(ಅಲ್ಪ ಆದಾಯ ವರ್ಗ–೨)	—	೩೬	—	—
	(ಮಧ್ಯದು ಆದಾಯ ವರ್ಗ–೧)	—	—	೪೮	—
	(ಮಧ್ಯಮ ಆದಾಯ ವರ್ಗ–೨)	—	—	೨೭	—
೧೫	ಎಚ್. ಎನ್. ಪುರ	—	—	೭	—
೧೬	ಚಿಕ್ಕಮಗಳೂರು ೨ನೇ ಹಂತ ೪೦೩೮	—	—	೧೯	—
	(ಮಧ್ಯಮ ಆದಾಯ ವರ್ಗ–೧)	—	೧೯	೫೧	—
	(ಮಧ್ಯಮ ಆದಾಯ ವರ್ಗ–೨)	—	—	೧೮	—
೧೭.	ಚಿಕ್ಕಮಗಳೂರು ೩ನೇ ಹಂತ ೪೫೪೨				
	(ಮಧ್ಯಮ ಆದಾಯ ವರ್ಗ–೧)	—	—	೧೧೦	—
	(ಮಧ್ಯಮ ಆದಾಯ ವರ್ಗ–೨)			೧೭೦	
೧೮.	ಚಿಕ್ಕಮಗಳೂರು ೪೪೮೧				
	(ಅಲ್ಪ ಆದಾಯ ವರ್ಗ–೧)	—	೪೨	—	—
	(ಅಲ್ಪ ಆದಾಯ ವರ್ಗ–೨)		೪೦		
	(ಮಧ್ಯಮ ಆದಾಯ ವರ್ಗ–೧)	—	—	೪೫	—
೧೯.	ಉನ್‌ಕಲ್				
	(ಮಧ್ಯಮ ಆದಾಯ ವರ್ಗ–೧)	—	—	೮೭	—
	(ಮಧ್ಯಮ ಆದಾಯ ವರ್ಗ–೨)			೭೫	
೨೦.	ಗದಗ್				
	(ಮಧ್ಯಮ ಆದಾಯ ವರ್ಗ–೧)	—	—	೨೦೦	—
	(ಮಧ್ಯಮ ಆದಾಯ ವರ್ಗ–೨)			೭೫	
೨೧.	ಚಿಕ್ಕೋಡಿ ೨೨೮೨				
	(ಮಧ್ಯಮ ಆದಾಯ ವರ್ಗ–೧)	—	—	೨೦	—
	(ಮಧ್ಯಮ ಆದಾಯ ವರ್ಗ–೨)			೭	
೨೨.	ಚಿಕ್ಕೋಡಿ ೨೨೭೭	—	೯	—	—
೨೩.	ಮಹಾಲ್ ಭಾಗಾಯತ್, ಚಾಪುರ				
	೧ನೇ ಹಂತ ೨೭೪೭/೩	೧೨೨	೧೬೫	—	—
೨೪.	ಮಹಾಲ್ ಭಾಗಾಯತ್ ೨ನೇ ಹಂತ ೨೭೪೭	೬೩	೧೬೩	—	—
೨೫.	ಮಹಾಲ್ ಭಾಗಾಯತ್ ೨೭೫೪				
	(ಮಧ್ಯಮ ಆದಾಯ ವರ್ಗ–೧)	—	—	೭೨	—
	(ಮಧ್ಯಮ ಆದಾಯ ವರ್ಗ–೨)			೧೧೬	

೧	೨	೩	೪	೫	೬
೨೬.	ಮಂಹಾಲ್ ಭಾಗಾಯತ್ ೨೭೬೪				
	(ಮಧ್ಯಮ ಆದಾಯ ವರ್ಗ–೧)	—	—	೪೩	—
	(ಮಧ್ಯಮ ಆದಾಯ ವರ್ಗ–೨)			೪೭	
೨೭.	ದೊಡ್ಡನಗುಡ್ಡೆ ಉಡುಪಿ	—	೪೦	೨೦	—
೨೮.	ಶಿವಳ್ಳಿ ಮಣಿಪಾಲ್ ೨೪೮೦				
	(ಮಧ್ಯಮ ಆದಾಯ ವರ್ಗ–೨) : (ನಿವೇಶನ)	—	—	೬೯ : ೩೭	—
	(ಹೆಚ್ಚಿನ ಆದಾಯ ವರ್ಗ–ನಿವೇಶನ)	—	—	—	೮೩
೨೯.	ಕುಶಾಲನಗರ				
	(ಮಧ್ಯಮ ಆದಾಯ ವರ್ಗ–೨)	—	—	೧೯	—
೩೦.	ಶಿವಳ್ಳಿ ಮಣಿಪಾಲ್ ೨೯೩೩ : ಸಿ	—	೮೪	—	—
೩೧.	ಪರಿಯಾ ಪಟ್ಟಣ				
	(ಮಧ್ಯಮ ಆದಾಯ ವರ್ಗ–೨)	—	—	೫೧	—
೩೨.	ಹೆಗ್ಗಡ ದೇವನ ಕೋಟೆ				
	(ಮಧ್ಯಮ ಆದಾಯ ವರ್ಗ–೨)	—	—	೩೨	—
೩೩.	ಹೆಗ್ಗಡದೇವನ ಕೋಟೆ ೩೨೯೪				
	(ಅಲ್ಪ ಆದಾಯ ವರ್ಗ–೧)	—	೧೪೫	—	—
	(ಅಲ್ಪ ಆದಾಯ ವರ್ಗ–೨)		೩೬		
೩೪.	ಕುಮೆಂಪು ನಗರ ೪ನೇ ಹಂತ	—	೨೨	—	—
೩೫.	ಕ್ಯಾತಮಾರನ ಹಳ್ಳಿ	—	೨೯	—	—
	(ಮಧ್ಯಮ ಆದಾಯ ವರ್ಗ–೧)			೩೮	
	(ಮಧ್ಯಮ ಆದಾಯ ವರ್ಗ–೨)			೧.೨೩	
೩೬.	ಚಾಮರಾಜನಗರ ೩೮೩೭	೮೬	೮೭	—	—
೩೭.	ಕಂಟೇನಹಳ್ಳಿ	—	೯೩	—	—
	(ಮಧ್ಯಮ ಆದಾಯ ವರ್ಗ–೧)			೫೫	—
	(ಮಧ್ಯಮ ಆದಾಯ ವರ್ಗ–೨)			೩೩	—
೩೮.	ನಂಜನಗೂಡು	೪೧	೪೪	—	—
	(ಮಧ್ಯಮ ಆದಾಯ ವರ್ಗ–೧)			೪೨	
	(ಮಧ್ಯಮ ಆದಾಯ ವರ್ಗ–೨)			೧೯	
೩೯.	ಕಲ್ಲಹಳ್ಳಿ	೨೬	—	—	—
೪೦.	ಗೋಪಾಲ	—	೨೪೦	೭೮	—
೪೧.	ಹಲಿಯಾಳ	—	೩೪	—	—
	(ಮಧ್ಯಮ ಆದಾಯ ವರ್ಗ–೧)			೧೪	
	(ಮಧ್ಯಮ ಆದಾಯ ವರ್ಗ–೨)			೧೪	
	ಒಟ್ಟು	೮೮೭	೧೩೫೯	೨೬೩೬	೯೫ ೫೯೭೭

ಕರ್ನಾಟಕ ಗೃಹ ಮಂಡಳಿಯು ೧೯೮೬-೮೭ನೇ ಸಾಲಿನ ಕಾರ್ಯಸೂಚಿ ಮನೆಗಳ ಪಟ್ಟಿ

(ರಾಜ್ಯ ಯೋಜನೆಯಲ್ಲಿ)

ಕ್ರಮ ಸಂಖ್ಯೆ	ಸ್ಥಳದ ಹೆಸರು	ಮನೆಗಳ ಸಂಖ್ಯೆ			
		ಆರ್ಥಿಕವಾಗಿ ಅಲ್ಪ ಹಿಂದುಳಿದ ವರ್ಗ	ಆದಾಯ	ಮಧ್ಯಮ ಆದಾಯ ವರ್ಗ	ಹೆಚ್ಚಿನ ಆದಾಯ ವರ್ಗ
೧.	ಅಗ್ರಹಾರ ದಾಸರಹಳ್ಳಿ	—	—	—	೨
೨.	ಸ್ವಯಂ ಆರ್ಥಿಕ ಯೋಜನೆ ಯಲಪಂಕ	—	—	—	೫೭
೩.	ಗುಡಿಬಂಡೆ, ಎಸ್.ಆರ್.ಎಚ್.ಎಸ್	೧೮			
೪.	ದಂಡಿನಶಿವಾರ (ಪ್ಯಾರ ಮೆಡಿಕಲ್)	೩			
೫.	ಕೆ. ಹೊಸ್ಮಮಾಚನಹಳ್ಳಿ (ಉಪಾಧ್ಯಾಯರ ವಸತಿ ಗೃಹ)-೪				
೬.	ತಿಪಟೂರು	—	೧೫	೧೦	—
೭.	ಭಾಗೇಪಲ್ಲಿ	—	೩೦	—	—
೮.	ಹಾರೋಹಳ್ಳಿ	೬೭	—	—	—
೯.	ಅಂಬಲಿ (ಉಪಾಧ್ಯಾಯರ ವಸತಿ ಗೃಹ)-೪				
೧೦.	ಸ್ವರ್ಣಾಕರ ಕಾಲೋ	೨೬	—	—	—
೧೧.	ಗಂಜಿಹಳ್ಳಿ ಉಪಾಧ್ಯಾಯರ ವಸತಿ ಗೃಹ)-೪				
೧೨.	ತಾಪರೇಗೆರೆ (ಉಪಾಧ್ಯಾಯರ ವಸತಿ ಗೃಹ)-೪				
೧೩.	ಚಾಕೇನಹಳ್ಳಿ (ಉಪಾಧ್ಯಾಯರ ವಸತಿ ಗೃಹ)-೬				
೧೪.	ಉಪಾಯಪುರ (ಉಪಾಧ್ಯಾಯರ ವಸತಿ ಗೃಹ)	೨	—	—	—
೧೫.	ತಾಲೀಕೋಟೆ	—	೧೦	—	—
೧೬.	ಬೆಳ್ತಂಗಡಿ	—	೧೬	—	—
೧೭.	ಪಿರಿಯಾ ಪಟ್ಟಣ	—	—	೧	—
೧೮.	ಹದಿನಾರು (ಉಪಾಧ್ಯಾಯರ ವಸತಿ ಗೃಹ)-೨				
೧೯.	ಕೌಡಳಿ (ಉಪಾಧ್ಯಾಯರ ವಸತಿ ಗೃಹ)-೪				
೨೦.	ಕಾರುಟ	—	—	೨	—
೨೧.	ಸಿರಸಿ (ಪ್ಯಾರ ಮೆಡಿಕಲ್)-೧				
೨೨.	ಹರಿಹರ (ಚಿತ್ರದುರ್ಗ)	—	೨	೧೨	—

೧	೨	೩	೪	೫	೬	
೨೩.	ಶಿವಮೊಗ್ಗ (ಕರ್ನಾಟಕ ಗೃಹ ಮಂಡಳಿ ನೌಕರರಿಗಾಗಿ) ಕಾರ್ಯಪಾಲಕ ಅಭಿಯಂತರರಿಗಾಗಿ–೧ ಸಹಾಯಕ ಕಾರ್ಯಪಾಲಕ ಅಭಿಯಂತರರಿಗಾಗಿ–೧ ಎರಡು ಮನೆಗಳು–೨ ಎರಡು ಮನೆಗಳು–೨	೨				
೨೪.	ಹಿಂಗೆರಿ	—	೧೦	೧೦	—	
೨೫.	ಬೆಳ್ಳಕೆರೆ (ವರ್ಗ–೧)	—	—	೧೩	—	
	(ಮಧ್ಯಮ ಆದಾಯ ವರ್ಗ–೨)	—	—	೬	—	
	(ಅಲ್ಪ ಆದಾಯ ವರ್ಗ–೧)	—	೧೬	—	—	
	,, ೨	—	೧೫	—	—	
೨೬.	ಸೊರಬ					
	(ಮಧ್ಯಮ ಆದಾಯ ವರ್ಗ–೧)	—	—	೫	—	
	(ಅಲ್ಪ ಆದಾಯ ವರ್ಗ–೧–ಎ)	—	೧೫	—	—	
	(ಅಲ್ಪ ಆದಾಯ ವರ್ಗ–೨)	—	೧೦	—	—	
೨೭.	ಕಾರವಾರ					
	(ಮಧ್ಯಮ ಆದಾಯ ವರ್ಗ–೨)	—	—	೫	—	
	,, –೧	—	—	೧೦	—	
	ಒಟ್ಟು	೯೩	೧೨೯	೮೨	೫೯	೩೬೩
	ಇತರೆ					೬೦
					ಒಟ್ಟು	೪೨೩

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ದಾವಣಗೆರೆಯಲ್ಲಿ ಯೋಗ್ಯವಾದ ಜಮೀನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರುವುದಿಲ್ಲ. ಆದ್ದರಿಂದ ಮನೆಗಳ ನಿರ್ಮಾಣ ಕಾರ್ಯಕ್ರಮ ಕೈಗೊಂಡಿರುವುದಿಲ್ಲವೆಂದು ಹೇಳಿದ್ದೀರಿ. ಆದರೆ ಎಲ್ಲಾ ನಗರಗಳಲ್ಲಿಯೂ ಮನೆಗಳನ್ನು ಕಟ್ಟಿದ್ದಾರೆ. ಒಂದೊಂದು ನಗರದಲ್ಲಿ ಇನ್ನೂರು, ಮುನ್ನೂರು, ನಾನ್ನೂರು ಮನೆಗಳನ್ನು ಕಟ್ಟಿದ್ದಾರೆ. ದಾವಣಗೆರೆಯಲ್ಲಿ ಮಾತ್ರ ಕಟ್ಟಿಲ್ಲ. ಇದು ಬೆಳೆಯತಕ್ಕ ನಗರ ನೀವೇನಾದರೂ ಸರ್ಕಾರಿ ಅಧಿಕಾರಿಗಳನ್ನು ಅಲ್ಲಿಗೆ ನೇಮಕ ಮಾಡಿದರೆ, ಅವರು ಅಲ್ಲಿ ಮನೆಗಳು ಸಿಕ್ಕುವುದಿಲ್ಲವೆಂದು ಬರುವುದೇ ಇಲ್ಲ. ಇಂತಹ ಪರಿಸ್ಥಿತಿ ಇರತಕ್ಕ ನಗರದಲ್ಲಿ ಜಮೀನು ಎಲ್ಲಿ ಸಿಕ್ಕಬೇಕು ನಿಮಗೆ ? ನಿಮ್ಮಲ್ಲಿ ಜಮೀನು ಪಶಪಡಿಸಿಕೊಳ್ಳತಕ್ಕ ಕಾಯಿದೆ ಇಲ್ಲವೇ ? ಈ ವಿಚಾರದಲ್ಲಿ ಅಲ್ಲಿಗೆ ಸರಿಯಾದ ಆಫೀಸರಗಳನ್ನು ನೇಮಿಸುವುದಿಲ್ಲ. ಇಲ್ಲಿ ಏಕೆ ಮನೆಗಳನ್ನು ನಿರ್ಮಾಣ ಮಾಡಿಲ್ಲ. ಇವರ ಬಗ್ಗೆ ವಿಚಾರ ಮಾಡಿ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಗೃಹನಿರ್ಮಾಣ ಮಂಡಲಿ ವತಿಯಿಂದ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಂತರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ೬೨ ಎಕರೆ ೨೦ ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಪ್ರೊಕ್ಲಮೇಷನ್ ಹೊರಡಿಸುವ ಹಂತದಲ್ಲಿದೆ. ಇದು ಆದ ತಕ್ಷಣವೇ ಜಮೀನು ಸ್ವಾಧೀನಪಡಿಸಿಕೊಂಡು ಗೃಹನಿರ್ಮಾಣ ಮಂಡಲಿಯವರು ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಹಾಕಿಕೊಳ್ಳಲಾಗುವುದು.

ಶ್ರೀ ಪಂಪಾಪತಿ.—ಮುಂದಿನ ವರ್ಷದಲ್ಲಿ ಪ್ರಯತ್ನ ಮಾಡುತ್ತೀರಾ ? ಎಷ್ಟು ಮನೆಗಳನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ತಮ್ಮನ್ನು ಕೇಳಿಯೇ ಮಾಡೋಣ. ನಗರ ಸಭೆಯು ನಿಮ್ಮ ಪಕ್ಷದ ಪ್ರಭಾವದಲ್ಲಿದೆ. ನಗರಸಭೆಯವರು ಇನ್ನೂರು ಸೈಟು ಕೊಡುವುದಾದರೆ ನಾಳೆಯೇ ಯೋಜನೆ ಹಾಕಿಕೊಳ್ಳುತ್ತೇವೆ. ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿ, ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಪಂಪಾಪತಿ.—ನಗರಸಭೆ ನಮ್ಮ ಪಕ್ಷದ ಅಧೀನದಲ್ಲಿದ್ದರೂ ಕೂಡ ನಗರಸಭೆಯಲ್ಲಿ ಜಮೀನು ಇಲ್ಲ. ನಗರಾಭಿವೃದ್ಧಿ ಮಂಡಲಿಯು ತಮ್ಮ ಪಕ್ಷದ ಆಡಳಿತದಲ್ಲಿದ್ದು ಸೈಟು ವಿತರಣೆ ಮಾಡುವುದಕ್ಕೆ ಈಗ ರೆಡಿ ಇದೆ. ತಾವು ಗೃಹನಿರ್ಮಾಣ ಮಂಡಲಿಗೆ ಪತ್ರ ಬರೆದು ಕೊಡುವುದಾದರೆ ಇಪತ್ತು ಸುಮಾರು ೫೦ ಎಕರೆ ಜಮೀನು ಸಿಕ್ಕುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈಗಾಗಲೇ ಸಿ.ಐ.ಟಿ.ಬಿ. ಅವರಿಗೆ ೨೫ ಪರ್ಸೆಂಟ್‌ನಷ್ಟು ಪ್ರದೇಶವನ್ನು ಗೃಹನಿರ್ಮಾಣ ಮಂಡಲಿಯವರಿಗೆ ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ. ಅವರು ೨೫ ಪರ್ಸೆಂಟ್ ಸೈಟ್ ಕೊಟ್ಟರೆ, ಗೃಹನಿರ್ಮಾಣ ಮಂಡಲಿಯವರು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ.

ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆ

೭೯ (೧೯೪) ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಣೆಬೆನ್ನೂರು ನಗರಕ್ಕೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು ಹರಿಹರ ಫೈಬರ್ಸ್ ಕಂಪನಿಯ ಕಲುಷಿತ ನೀರೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಕಲುಷಿತ ನೀರನ್ನು ತಪ್ಪಿಸುವುದಕ್ಕೋಸ್ಕರ ರಾಣೆಬೆನ್ನೂರು ತಾಲ್ಲೂಕು ಮುದೇನೂರ್ ಹತ್ತಿರದಿಂದ ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆ ಯಾವ ಹಂತದಲ್ಲಿದೆ ;

ಇ) ಸದರಿ ಯೋಜನೆಗೆ ತಗಲುವ ವೆಚ್ಚವೆಷ್ಟು ? ಹಾಗೂ ಸದರಿ ಯೋಜನೆಯನ್ನು ೧೯೬೭-೬೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಲಾಗಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಯೋಜನೆಗೆ ಸಂಬಂಧಿಸಿದ ಅಂದಾಜು ಮತ್ತು ನಕ್ಷೆಯನ್ನು ಸಿದ್ಧಪಡಿಸುತ್ತಿದೆ.

ಇ) ಅಂದಾಜು ವೆಚ್ಚ ೪೦೬.೩೧ ಲಕ್ಷ ರೂ.ಗಳು ೧೯೬೭-೬೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಿಲ್ಲ.

ಇಲ್ಲಿ ಎರಡನೇ ಪ್ರಶ್ನೆ (ಆ) ಗೆ ''ಸಿದ್ಧಪಡಿಸುತ್ತಿದೆ'' ಎಂದು ಉತ್ತರದಲ್ಲಿದೆ. ಅದನ್ನು ''ಸಿದ್ಧಪಡಿಸಿದೆ'' ಎಂದೂ, ಮೂನೇ ಪ್ರಶ್ನೆ (ಇ)ಗೆ. ''ಆಯವ್ಯಯ ಪಟ್ಟಿಯಲ್ಲಿ ಸೇರಿಸಿಲ್ಲ'' ಎಂದಿದೆ, ಇದು ''ಸೇರಿಸಲು ಪ್ರಯತ್ನಿಸಲಾಗುವುದು'' ಎಂದು ತಿದ್ದುಪಡಿಯಾಗಬೇಕು.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ನಗರಕ್ಕೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು, ಹರಿಹರ ಪಾಲಿಫೈಬರ್ ಕಂಪನಿಯ ಕಲುಷಿತ ನೀರು ಎಂಬುದು ಸರಕಾರದ ಗಮನಕ್ಕೆ ಬಂದಿಲ್ಲ ಎಂಬ ಉತ್ತರ ಕೇಳಿ ಬಹಳ ಸಂತೋಷ ಆಯಿತು. ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಯೋಜನೆಯ ನಕ್ಷೆ ಮತ್ತು ಅಂದಾಜು ತಯ್ಯಾರಾಗಿದೆ ಎಂಬ ವಿಚಾರ ಕೇಳಿದೆ, ೪೦೬.೩೧ ಲಕ್ಷ ರೂಪಾಯಿಗಳ ಅಂದಾಜು ಮತ್ತು ನಕ್ಷೆ ತಯಾರಾಗಿದೆ ಎಂಬುದನ್ನು ಕೇಳಿ